# ಭಾರತದ ಯುವಜನತೆಗೆ ಸ್ವಾಮಿ ವಿವೇಕಾನಂದರ ಆದರ್ಶಗಳು

ಹಳೇಕೋಟೆ ಎನ್. ರಮೇಶ್

ಸ್ವಾಮಿ ವಿವೇಕಾನಂದರ ಸ್ಫೂರ್ತಿದಾಯಕ ನುಡಿಗಳ ಹಿಂದಿರುವ ಪ್ರೇರಣಾತ್ಮಕ ಶಕ್ತಿಯನ್ನು ಕುರಿತು ಇಲ್ಲಿ ವಿವರಿಸಿರುವ ಲೇಖಕರು, ಆಧುನಿಕ ವಿಚಾರ, ಆಸಕ್ತಿಗಳೊಂದಿಗೆ ಸಾಂಪ್ರದಾಯಿಕ ಕೃಷಿಜೀವನವನ್ನು ಅಳವಡಿಸಿಕೊಂಡಿದ್ದು, ಅನೇಕ ಗ್ರಂಥಗಳನ್ನು ರಚಿಸಿದ್ದಾರೆ.

''ನಿಮಗೆ ಭಾರತವನ್ನು ತಿಳಿಯಬೇಕೆಂಬ ಆಸೆಯಿದ್ದರೆ ವಿವೇಕಾನಂದರನ್ನು ಅಧ್ಯಯನ ಮಾಡಿ, ಅವರಲ್ಲಿ ಎಲ್ಲವೂ ಸಕಾರಾತ್ಮಕ, ನಿಷೇಧಾತ್ಮಕವಾದುದು ಯಾವುದೂ ಇಲ್ಲ'' ಎಂದು ವಿಶ್ವಕವಿ ರವೀಂದ್ರನಾಥ ಠಾಕೂರ್ ಹೇಳಿದ್ದಾರೆ. ಸ್ನೇಹಿತರೇ, ಭಾರತದ ಪುನರುತ್ಥಾನದ ಪ್ರಥಮ ಮುಹೂರ್ತದಲ್ಲಿ ಸ್ವಾಮೀಜಿಯವರ ಪಾಂಚಜನ್ಯ ಸದೃಶವಾದ ಧೀರ ಮತ್ತು ಶಕ್ತಿಸಂಚಾರಕ ಸಿದ್ಧವಾಣಿಯು ವ್ಯಕ್ತಿ-ವ್ಯಕ್ತಿಗಳಲ್ಲಿ ಮತ್ತು ಸಮಗ್ರ ರಾಷ್ಟ್ರದಲ್ಲಿ ಸುರುಳಿ ಸುತ್ತಿ ಸುಪ್ತವಾಗಿದ್ದ ಕುಂಡಲಿನೀ ಶಕ್ತಿಯನ್ನೇ ಎಚ್ಚರಿಸಿ ಕಾರ್ಯಶೀಲವನ್ನಾಗಿ ಮಾಡಿತು. ಇದು ಹಿಂದೆ ಎಂದೋ ಆಗಿ ಹೋದ ಐತಿಹಾಸಿಕ ವಿಷಯವಾಗಿಲ್ಲ, ಇಂದೂ ಜೀವಂತವಾಗಿ, ಸಶಕ್ತವಾಗಿ ಕೋಟ್ಯಂತರ ಹೃದಯಗಳನ್ನು ನಡೆಸುತ್ತಿರುವ ಶಕ್ತಿ ಸ್ಫೂರ್ತಿ - ಜ್ಯೋತಿಯಾಗಿದೆ ಮತ್ತು ಮುಂದೆ ಹುಟ್ಟಿ ಬರುವ ಅಸಂಖ್ಯ ಜೀವರುಗಳಿಗೆ ಮಾರ್ಗದರ್ಶಕ ಸ್ತಂಭ ದೀಪಿಕೆಯಾಗಲಿದೆ.

ನೀವೆಲ್ಲಾ ತಿಳಿದಿರುವಂತೆ ಸ್ವಾಮೀಜಿ ಕೇವಲ ಒಬ್ಬ ಸಂನ್ಯಾಸಿ ಮಾತ್ರವಲ್ಲ, ಅವರು ಅಪ್ರತಿಮ ದೇಶಭಕ್ತ, ಅಸಾಧಾರಣ ವಾಗ್ಮಿ, ಅಪೂರ್ವವಾದ ಸಮಾಜ ಸುಧಾರಕ, ಆಧುನಿಕ ಭಾರತದ ನಿರ್ಮಾತೃ, ಜ್ಞಾನ-ವಿಜ್ಞಾನ, ತಂತ್ರಜ್ಞಾನಗಳ ಸಾಕಾರಮೂರ್ತಿ; ಆಧ್ಯಾತ್ಮಿಕ ಶಕ್ತಿಯೊಡನೆ ಎಲ್ಲವೂ ಸಾಧ್ಯ ಎಂದು ತೋರಿಸಿಕೊಟ್ಟ ವೀರೋದಾತ್ತ, ವಿರಕ್ತ ವಿರಾಗಿ.

ಅವರು ಯುವಕರಿಗೆ ಮಾನಸಿಕ ಏಕಾಗ್ರತೆಯನ್ನು ಅಭಿವೃದ್ಧಿಗೊಳಿಸಿಕೊಳ್ಳಲು, ಆಧ್ಯಾತ್ಮ ಹಾಗೂ ನೈತಿಕತೆಯನ್ನು ಗಟ್ಟಿಗೊಳಿಸಲು, ಧಾರ್ಮಿಕ ತಳಪಾಯದೊಂದಿಗೆ ಬದುಕನ್ನು ಕಟ್ಟಿಕೊಳ್ಳಲು ಹಾಗೂ ನಿಃಸ್ವಾರ್ಥ ಮನೋಭಾವ ಮತ್ತು ತ್ಯಾಗವೇ ಪರಮಾದರ್ಶವೆಂದು ಸಾರಿ ತಿಳಿಸಿದ್ದಾರೆ. ''ಈ ನಮ್ಮ ಪುಣ್ಯಭೂಮಿಯು ಧರ್ಮ ಮತ್ತು ತತ್ತ್ವಗಳ ತವರುಮನೆ. ಆಧ್ಯಾತ್ಮಿಕ ವೀರರ ಜನ್ಮಸ್ಥಾನ, ತ್ಯಾಗಿಗಳ ನಾಡು, ರಾಷ್ಟ್ರಜೀವನದ ತಳಪಾಯ. ಜೀವನದ ಕೇಂದ್ರವು ಧರ್ಮವಲ್ಲದೆ ಬೇರಲ್ಲ, ಆದ್ದರಿಂದ ಅಧ್ಯಾತ್ಮದಿಂದಲೇ ಜೀವನ, ಇದನ್ನು ಬಿಟ್ಟು ಬೇರೆ ಏನನ್ನೂ ಚಿಂತಿಸದಿರಿ. ಈ ಶಕ್ತಿಯೇ ಎಲ್ಲಕ್ಕೂ ಮೂಲ ಹಾಗೂ ಪ್ರೇರಕವಾಗಿದೆ'' ಎಂಬ ದುಂದುಭಿಯನ್ನು ಅವರು ಮೊಳಗಿಸಿದರು.

''ಶುದ್ಧ ಚಾರಿತ್ರ್ಯವೊಂದೇ ಕಷ್ಟ ಪರಂಪರೆಗಳ ಅಭೇದ್ಯ ಕೋಟೆಯನ್ನು ಸೀಳಿಕೊಂಡು ಹೋಗಬಲ್ಲದು. ಆದುದರಿಂದ ಮೊದಲು ಚಾರಿತ್ರ್ಯವನ್ನು ಬೆಳೆಸಿ. ಅದು ನೀವು ಮಾಡಬೇಕಾದ ಅತ್ಯುನ್ನತ ಕರ್ತವ್ಯ. ಶಕ್ತಿಶಾಲಿಗಳಾಗಿ, ಶ್ರದ್ಧಾವಂತರಾಗಿ. ಆಗ ಎಲ್ಲವೂ ನಿಶ್ಚಿತವಾಗಿ ಸಾಧಿಸಲ್ಪಡುತ್ತದೆ. ಶಕ್ತಿಯೆಲ್ಲ ನಿಮ್ಮೊಳಗೇ ಇದೆ. ನೀವು ಏನು ಬೇಕಾದರೂ ಮಾಡಬಲ್ಲಿರಿ. ಎಲ್ಲವನ್ನೂ ಮಾಡಬಲ್ಲಿರಿ'' ಎಂಬ ಸ್ವಾಮೀಜಿಯವರ ವೀರನುಡಿಗಳು ಇಂದಿನ ಯುವಜನತೆಗೆ ಅತ್ಯಗತ್ಯವಾಗಿದೆ.

''ಸಾಧ್ಯವಾದರೆ ಸಹಾಯ ಮಾಡಿ, ಇಲ್ಲದಿದ್ದರೆ ಇತರರನ್ನು ನೋಯಿಸಲು ಪ್ರಯತ್ನಿಸದಿರಿ. ನಿಮ್ಮ ತಪ್ಪಿಗಾಗಿ ಇತರರನ್ನು ದೂಷಿಸಬೇಡಿ. ನಿಮ್ಮ ಕಾಲ ಮೇಲೆ ನೀವು ನಿಲ್ಲಿ. ಸಂಪೂರ್ಣ ಜವಾಬ್ದಾರಿಯನ್ನು ನಿಮ್ಮ ತಲೆಯ ಮೇಲೆ ಹೊತ್ತುಕೊಳ್ಳಿ; ಹಿಂತಿರುಗಿ ನೋಡಬೇಡಿ. ಯಾವಾಗಲೂ ಮುನ್ನಡೆಯಿರಿ. ಅನಂತ ಶಕ್ತಿ, ಅನಂತ ಉತ್ಸಾಹ, ಸಾಹಸ ಮತ್ತು ತಾಳ್ಮೆಗಳಿಂದ ಏನನ್ನಾದರೂ ಸಾಧಿಸಬಹುದು ಎಂದು ಕಾಯುತ್ತಿರಿ.

''ಅನುಕರಣೆ ಎಂದಿಗೂ ಪ್ರಗತಿಯ ಗುರುತಲ್ಲ. ಅದೊಂದು ಹೀನ ಅವನತಿಯ ಚಿಹ್ನೆ. ನಿಮ್ಮ ಆಧ್ಯಾತ್ಮಿಕ ಸಂಪತ್ತನ್ನು ನಿರ್ಲಕ್ಷಿಸಿ, ಕಣ್ಣು ಕೋರೈಸುವ ಪಾಶ್ಚಾತ್ಯ ಭೌತಿಕ ನಾಗರಿಕತೆಯ ಬೆನ್ನು ಹತ್ತಿದಲ್ಲಿ ಮೂರು ತಲೆಮಾರುಗಳಲ್ಲಿ ನಿಮ್ಮ ಜನಾಂಗ ನಿರ್ನಾಮವಾಗುತ್ತದೆ'' ಎಂದು ಸ್ವಾಮೀಜಿ ನೀಡಿರುವ ಎಚ್ಚರಿಕೆಯ ಮಾತುಗಳನ್ನು ಇಂದು ಹೆಚ್ಚಾಗಿ ಯುವಜನತೆ ಮನಗಾಣಬೇಕಿದೆ.

ಸ್ವಾಮೀಜಿಯವರು ಭಾರತೀಯರೆಲ್ಲರನ್ನೂ ಅಮೃತಪುತ್ರರೆಂದು ಸಂಬೋಧಿಸಿದರು. ''ವೀರಾತ್ಮರೇ, ಧೀರರಾಗಿ. ನೆಚ್ಚುಗೆಡದಿರಿ, ಭಾರತೀಯರು ನಾವು ಎಂದು ಹೆಮ್ಮೆಯಿಂದ ಸಾರಿ ಹೇಳಿ. ಭಾರತೀಯರು ನಮ್ಮ ಪ್ರಾಣ. ಭಾರತೀಯ ಸಮಾಜ ನಮ್ಮ ಬಾಲ್ಯದ ತೊಟ್ಟಿಲು, ತಾರುಣ್ಯದ ನಂದನವನ, ವೃದ್ಧಾಪ್ಯದ ವಾರಣಾಸಿ ಎಂದು ಎದೆ ತಟ್ಟಿಕೊಂಡು ಘೋಷಿಸಿ'' ಎಂದು ಭಾರತೀಯರೆಲ್ಲರಿಗೂ ಹೇಳಿದರು.

ವಿವೇಕಾನಂದರು ಪಾಶ್ಚಾತ್ಯ ಅನುಕರಣೆಯ ಬಗ್ಗೆ ಉಗ್ರವಾಗಿ ಮಾತನಾಡುತ್ತಾರೆ. ಪಾಶ್ಚಾತ್ಯರ ಭಾವನೆ, ಭಾಷೆ, ಆಹಾರ, ಉಡಿಗೆ, ತೊಡಿಗೆ, ಆಚಾರ, ವ್ಯವಹಾರ ಮುಂತಾದವನ್ನು ಅನುಸರಿಸಿದರೆ, ನಾವು ಪಾಶ್ಚಾತ್ಯರೂ, ಬಲಾಢ್ಯರೂ ಮತ್ತು ಪರಾಕ್ರಮಶಾಲಿಗಳೂ ಆಗುವೆವು ಎಂದು ಅನೇಕಾನೇಕ ಆಧುನಿಕ ಭಾರತೀಯರು ಬೀಗುತ್ತಾರೆ. ಆದರೆ ಸ್ವಾಮೀಜಿ ಹೀಗೆ ಹೇಳುತ್ತಾರೆ: ''ಅಂಥ ಅನುಕರಣೆಯಿಂದ ಹೆರರ ಭಾವನೆ ಎಂದಿಗೂ ನಮ್ಮದಾಗದು, ಸಿಂಹದ ತೊಗಲನ್ನು ಧರಿಸಿದ ಮಾತ್ರಕ್ಕೆ ಕತ್ತೆ ಸಿಂಹವಾಗುವುದೆ?''

ಸ್ವಾಮಿ ವಿವೇಕಾನಂದರು ತಮ್ಮ ಶಕ್ತಿಯುತ ವ್ಯಕ್ತಿತ್ವದ ಮೂಲಕ, ಪ್ರಭಾವಪೂರ್ಣ ವಾಕ್‌ಶಕ್ತಿಯ ಮೂಲಕ ಹಾಗೂ ಪ್ರಬೋಧಕ ಬರಹಗಳ ಮೂಲಕ ನಮ್ಮ ರಾಷ್ಟ್ರಚೇತನವನ್ನು ಜಾಗೃತಗೊಳಿಸಿ, ಯುವಕರಲ್ಲಿ ನವೋತ್ಸಾಹವನ್ನು ಕೆರಳಿಸಿ, ಅವರಲ್ಲಿ ನಮ್ಮ ಸಂಸ್ಕೃತಿಯ ಬಗ್ಗೆ ಹೆಮ್ಮೆಯನ್ನು ಕುದುರಿಸಿ ಸ್ವತಂತ್ರ ನವಭಾರತ ನಿರ್ಮಾಣಕ್ಕೆ ಬುನಾದಿಯನ್ನು ಹಾಕಿದರು. ಸ್ವಾಮೀಜಿಯವರ ಕೃತಿಗಳನ್ನು ಓದಿದಾಗ ಇಂದಿಗೂ ಅವರ ಶಕ್ತಿ ಪ್ರಭಾವಗಳ ಸಂಚಾರ ನಮ್ಮಲ್ಲುಂಟಾಗುತ್ತದೆ. ಅಪಾರ ಜ್ಞಾನ, ಸಂಪತ್ತಿನಿಂದ ಕೂಡಿದ ಅವರ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ನಾವು ದೇವಮಾನರಾಗೋಣ.

✤

# ಭಗವದ್ಗೀತೆ : ಸೃಷ್ಟಿಯ ವಿಜ್ಞಾನ ಕೋಶ

ಡಾ. ಎಸ್.ಪಿ. ಯೋಗಣ್ಣ

ವೈಜ್ಞಾನಿಕ ಹಿನ್ನೆಲೆಯಲ್ಲಿ ಭಗವದ್ಗೀತೆಯ ವೈಶಿಷ್ಟ್ಯ ಹಾಗೂ ಉಪಯುಕ್ತತೆಯನ್ನು ವಿಶ್ಲೇಷಿಸಿರುವ ಲೇಖಕರು ನಿವೃತ್ತ ವೈದ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದು, ಪ್ರಾಚೀನ ಭಾರತೀಯ ವೈದ್ಯವಿಜ್ಞಾನ, ಯೋಗ ಮೊದಲಾದ ವಿಷಯಗಳಲ್ಲಿ ಆಳವಾದ ಅಧ್ಯಯನ ನಡೆಸಿದ್ದಾರೆ. ಅವರು ಉತ್ತಮ ಲೇಖಕರೂ ಆಗಿದ್ದು, ಕನ್ನಡದಲ್ಲಿ 'ಸಮಗ್ರ ಆರೋಗ್ಯದರ್ಶನ' ಎಂಬ ಬೃಹತ್ ಗ್ರಂಥವನ್ನು ರಚಿಸಿದ್ದಾರೆ.

ಭಗವದ್ಗೀತೆಯಲ್ಲಿ ಸೃಷ್ಟಿಯ ಹುಟ್ಟು, ಬೆಳವಣಿಗೆಗೆ ಸಂಬಂಧಿಸಿದ – ಅದರಲ್ಲೂ ಮನುಷ್ಯನಿಗೆ ಸಂಬಂಧಿಸಿದ ಇಂದ್ರಿಯ ಮತ್ತು ಇಂದ್ರಿಯಾತೀತವಾದ ಜ್ಞಾನವಿದೆ. ಸಾಮಾನ್ಯರ ಬುದ್ಧಿಗೆ ನಿಲುಕುವ ಜ್ಞಾನ ಇಂದ್ರಿಯಜ್ಞಾನ. ಸಾಮಾನ್ಯ ಮನುಷ್ಯರ ಬುದ್ಧಿಗೆ ನಿಲುಕದ, ಅತೀತ ಮನಸ್ಸಿಗೆ ಮಾತ್ರ ನಿಲುಕುವ, ಸೃಷ್ಟಿಯ ಅಂತಿಮ ಸತ್ಯಗಳು ಇಂದ್ರಿಯಾತೀತ ಜ್ಞಾನವಾಗಿವೆ. ಆಧುನಿಕ ವಿಜ್ಞಾನದ ಪರಿಮಿತಿಗೆ ಸಿಗದ ಸತ್ಯಗಳು ಅಲ್ಲಿವೆ. ಮನುಷ್ಯನ ಮನಸ್ಸಿನಲ್ಲಿ ಉದ್ಭವಿಸುವ ಸಹಜ, ಸಕಾರಾತ್ಮಕ ಮತ್ತು ನಕಾರಾತ್ಮಕ ಆಲೋಚನೆಗಳ ಸಂಘರ್ಷ ಮತ್ತು ಅವುಗಳನ್ನು ನಿವಾರಣೆ ಮಾಡಿಕೊಳ್ಳುವ ವಿಧಿ-ವಿಧಾನಗಳ ಮಹಾದರ್ಶನ ಅಲ್ಲಿದೆ. ಇದೊಂದು ಧರ್ಮಗ್ರಂಥ ಮಾತ್ರವಲ್ಲ, ಸೃಷ್ಟಿಯ ವೈಜ್ಞಾನಿಕ ಸತ್ಯಗಳನ್ನೊಳಗೊಂಡ 'ಸೃಷ್ಟಿ ವಿಜ್ಞಾನ ಕೋಶ'ವಾಗಿದೆ. ಈ ಬಗ್ಗೆ ಕೃಷ್ಣನೇ ಹೇಳಿರುವ ಮಾತಿದು.

**ಜ್ಞಾನಂ ತೇಽಹಂ ಸವಿಜ್ಞಾನಮಿದಂ ವಕ್ಷ್ಯಾಮ್ಯಶೇಷತಃ।**
**ಯಜ್ಜ್ಞಾತ್ವಾ ನೇಹ ಭೂಯೋಽನ್ಯತ್ ಜ್ಞಾತವ್ಯಮವಶಿಷ್ಯತೇ॥** *(೭.೨)*

('ನಾನು ನಿನಗೆ ವಿಜ್ಞಾನ ಸಹಿತವಾದ ಜ್ಞಾನವನ್ನು ಪೂರ್ತಿಯಾಗಿ ತಿಳಿಸಿಕೊಡುವೆನು. ಅದನ್ನು ತಿಳಿದ ಮೇಲೆ ಈ ಲೋಕದಲ್ಲಿ ಮತ್ತೆ ತಿಳಿಯಬೇಕಾದದ್ದು ಏನೂ ಉಳಿಯುವುದಿಲ್ಲ.')

ಈ ದೃಷ್ಟಿಯಿಂದ ಭಗವದ್ಗೀತೆಯ ಪ್ರತಿಯನ್ನು ನಮ್ಮ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮರವರಿಗೆ ಉಡುಗೊರೆ ನೀಡಿರುವುದು ಸಮಂಜಸವಾಗಿದೆ. ಪ್ರಪಂಚದ ಬಗೆಗಿನ ಜ್ಞಾನವನ್ನು ಪ್ರಾಪಂಚಿಕ ಮಟ್ಟದಲ್ಲಿ ವಿಸ್ತರಿಸಲು ಇದು ಸಹಕಾರಿಯಾಗಿದೆ.

ಸೃಷ್ಟಿಯನ್ನು ಮಾಡಿದ, ಸೃಷ್ಟಿಕರ್ತ ಭಗವಂತನೇ, ತಾನು ಸೃಷ್ಟಿಸಿದ ಬ್ರಹ್ಮಾಂಡದ ರೀತಿ-ನೀತಿ ವಿಕಾಸ, ಪರಿವರ್ತನೆ ಇತ್ಯಾದಿ ಎಲ್ಲ ವೈಜ್ಞಾನಿಕ ಸತ್ಯಾಂಶಗಳನ್ನೂ ಲೋಕಕ್ಕೆ ತಿಳಿಸಿದನೆಂಬುದು ವಾಡಿಕೆ. ವಾಲ್ಮೀಕಿಯು ರಾಮಾಯಣದಲ್ಲಿ ವಿವಿಧ ಪಾತ್ರಗಳ ಮೂಲಕ ಇದನ್ನೇ ವಿವರಿಸಿದ್ದಾನೆ. ವೇದ, ಉಪನಿಷತ್ತುಗಳಲ್ಲಿ ಇರುವುದೂ ಈ ಜ್ಞಾನವೇ. ತದನಂತರ ವ್ಯಾಸರು ಮಹಾಭಾರತದಲ್ಲಿ ಬಹು ವ್ಯಾಪಕವಾಗಿ ಮತ್ತು ಬಹುಪಾತ್ರಗಳ ಮೂಲಕ ಈ ಜ್ಞಾನವನ್ನು ದಾಖಲಿಸಿದ್ದಾರೆ. ಆಧ್ಯಾತ್ಮಿಕ ಜ್ಞಾನದ ಪ್ರಮುಖ ಅಂಶಗಳನ್ನು ಕೃಷ್ಣನ ಮೂಲಕ ಅರ್ಜುನನಿಗೆ ಭಗವದ್ಗೀತೆಯ ರೂಪದಲ್ಲಿ ಬೋಧಿಸಿ ದಾಖಲಿಸಲಾಗಿದೆ. ಭಗವದ್ಗೀತೆ ಆಧ್ಯಾತ್ಮಿಕ ಜ್ಞಾನಕೋಶ. ತದನಂತರ ಏಸು, ಬುದ್ಧ, ಮಹಮದ್ ಪೈಗಂಬರ್, ಶಂಕರ, ರಾಮಾನುಜ, ಬಸವಣ್ಣ, ದಾಸರು, ಡಿ.ವಿ.ಜಿ, ಇತ್ಯಾದಿ ಪ್ರಪಂಚದ ಎಲ್ಲಾ ದಾರ್ಶನಿಕರೂ ಸಹ ಭಗವದ್ಗೀತೆಯ ಒಂದೊಂದು ವಿಷಯವನ್ನು ಪ್ರಮುಖವಾಗಿಟ್ಟುಕೊಂಡು ಜಗತ್ತಿನಲ್ಲಿ ಪ್ರಚುರಪಡಿಸಿರುವುದನ್ನು ನಾವು ಕಾಣಬಹುದಾಗಿದೆ. ಕಾರಣ, ಭಗವದ್ಗೀತೆ ಜಾಗತಿಕ ಮಟ್ಟದಲ್ಲಿ ಪ್ರಪ್ರಥಮ ಲಿಖಿತ ಜ್ಞಾನ ಕೋಶ. ಸಂಸ್ಕೃತದಲ್ಲಿದ್ದ ವೇದಗಳನ್ನು ಆಂಗ್ಲಭಾಷೆಗೆ ಭಾಷಾಂತರಿಸಿದ, ಪಾಶ್ಚಿಮಾತ್ಯ ಶ್ರೇಷ್ಠ ವಿದ್ವಾಂಸ ಮ್ಯಾಕ್ಸಮುಲ್ಲರ್‌ನ ಅಭಿಪ್ರಾಯವೂ ಸಹ ಇದೇ ಆಗಿದೆ. ಆಧುನಿಕ ವಿಜ್ಞಾನದ ಎಲ್ಲ ಪ್ರಕಾರಗಳನ್ನೂ ಆಧ್ಯಾತ್ಮಿಕ ಜ್ಞಾನಕ್ಕೆ ಜೋಡಿಸಬಹುದಾಗಿದೆ. ಇವು ಆಧ್ಯಾತ್ಮಿಕ ವಿಜ್ಞಾನದ ವಿವಿಧ ಕವಲುಗಳ ವಿಕಸಿತ ಜ್ಞಾನಗಳಾಗಿವೆ.

ಸೃಷ್ಟಿಯ ರಚನೆಯು ಅತೀತ ಶಕ್ತಿ, ಪ್ರಕೃತಿ (ವಸ್ತುಗಳ ರೂಪ), ಜೀವ, ಕಾಲ ಮತ್ತು ಕರ್ಮಗಳಿಂದಾಗಿದೆ ಎಂಬ ಕೃಷ್ಣನ ಉಕ್ತಿ ಆಧುನಿಕ ವಿಜ್ಞಾನ ಜಗತ್ತೂ ಸಹ ಒಪ್ಪುವ ಸಂಗತಿಯಾಗಿದೆ. ಸೃಷ್ಟಿಯ ಉದ್ದೇಶ, ಅದರಲ್ಲಿರುವ ಎಲ್ಲ ಅಂಗಗಳ ನಡುವಿನ ಅವಿನಾಭಾವ ಸಂಬಂಧ, ಮನುಷ್ಯನಿಗೆ ಸಂಬಂಧಿಸಿದಂತೆ ಅವನ ಬದುಕಿನ ಉದ್ದೇಶ, ಬೇಕು-ಬೇಡಗಳು, ವ್ಯಾವಹಾರಿಕ ಬದುಕು, ಸಾವಿನಾಚೆಗಿನ ಸತ್ಯಸಂಗತಿಗಳು, ಆಲೋಚನೆಗಳ ನಿಗ್ರಹ, ಅತೀತಶಕ್ತಿ ಮತ್ತು ಅದನ್ನು ಗಳಿಸುವ ವಿಧಿ-ವಿಧಾನಗಳು ಹಾಗೂ ಉಪಯೋಗಗಳು ಇತ್ಯಾದಿ, ಆಧುನಿಕ ವಿಜ್ಞಾನದಲ್ಲಿರುವ ವಾಸ್ತವ ವಿಚಾರಗಳ ಜ್ಞಾನವನ್ನು ಭಗವದ್ಗೀತೆ ಒಳಗೊಂಡಿದೆ.

ಸೃಷ್ಟಿಯಲ್ಲಿ ಅತ್ಯಂತ ಶ್ರೇಷ್ಠವಾಗಿ ವಿಕಾಸವಾಗಿರುವ ಜೀವಿ ಮನುಷ್ಯ. ಅವನಲ್ಲಿರುವ ಮನಸ್ಸು ಇನ್ನೂ ಉತ್ಕೃಷ್ಟ ಮತ್ತು ಶಕ್ತಿಯುತ. ಮನಸ್ಸಿಗೆ ಸರಿ ಸಮಾನವಾದದ್ದು ಸೃಷ್ಟಿಯಲ್ಲಿ ಮತ್ತೊಂದಿಲ್ಲ. ಅಂತಹ ಮನುಷ್ಯನಿಗೆ, ಸೃಷ್ಟಿಕರ್ತ ನಿಗದಿಪಡಿಸಿರುವ ಜವಾಬ್ದಾರಿಗಳ ಅರಿವು ಭಗವದ್ಗೀತೆಯಲ್ಲಿದೆ. ಈ ಅಂಶವನ್ನು ಈ ಶ್ಲೋಕವೊಂದರಿಂದ ಅರಿಯಬಹುದಾಗಿದೆ:

**ತ್ವಮಕ್ಷರಂ ಪರಮಂ ವೇದಿತವ್ಯಂ।**
**ತ್ವಮಸ್ಯ ವಿಶ್ವಸ್ಯ ಪರಂ ನಿಧಾನಮ್।**
**ತ್ವಮವ್ಯಯಃ ಶಾಶ್ವತಧರ್ಮಗೋಪ್ತಾ**
**ಸನಾತನಸ್ತ್ವಂ ಪುರುಷೋ ಮತೋ ಮೇ।।** *(೧೧.೧೮)*

(ತಿಳಿಯಬೇಕಾಗಿರುವ ಶಾಶ್ವತವಾದ ಪರಮವಸ್ತು ನೀನು. ಈ ವಿಶ್ವಕ್ಕೆ ನೀನೇ ಪರಮಾಧಾರನಾಗಿದ್ದೀಯೆ. ನೀನು ಅವ್ಯಯ, ಶಾಶ್ವತವಾಗಿ ಧರ್ಮವನ್ನು ರಕ್ಷಿಸತಕ್ಕವನು ನೀನು. ಸನಾತನ ಪುರುಷನೂ ನೀನೇ.)

ವ್ಯಾಸನು ಕೃಷ್ಣನಿಂದ ಭಗವದ್ಗೀತೆಯನ್ನು ಅರ್ಜುನನಿಗೆ ಬೋಧಿಸಲು ರಣರಂಗವನ್ನು ಏಕೆ ಆಯ್ಕೆ ಮಾಡಿಕೊಂಡನೋ ಗೊತ್ತಿಲ್ಲ. ವ್ಯಾಸನಿಗೆ ರಣರಂಗವೇ ವಿಷಾದ ಮನಃಸ್ಥಿತಿಗೆ ಅತ್ಯುತ್ತಮವೆಂದೆನಿಸಿರಬಹುದು. ೧೮ ಅಧ್ಯಾಯಗಳ ೭೦೦ ಶ್ಲೋಕಗಳನ್ನುಳ್ಳ ಗೀತೆಯನ್ನು ಬೋಧಿಸುವಾಗ ರಣರಂಗದಲ್ಲಿ ಶತ್ರುಗಳು ಕೈಕಟ್ಟಿ ಕುಳಿತುಕೊಂಡಿದ್ದರೇ ಎಂಬ ಯಕ್ಷಪ್ರಶ್ನೆ ಸಹಜ. ಕೃಷ್ಣನೇ ಸೃಷ್ಟಿಕರ್ತ ಅಥವಾ ಅತೀತ ಶಕ್ತಿಯುಳ್ಳವನಿರಬಹುದು, ಅಥವಾ ಅವನು ಅತೀತ ಶಕ್ತಿಯ ಸಂಕೇತವಿರಬಹುದು. ಅರ್ಜುನನ ಮನಸ್ಸಿನಲ್ಲಿರುವ ನಕಾರಾತ್ಮಕ ಆಲೋಚನೆಗಳೆಲ್ಲವನ್ನೂ ತನ್ನ ಅತೀತಶಕ್ತಿಯಿಂದ ಅರಿತ ಕೃಷ್ಣ ಅವನಲ್ಲಿ ಸಕಾರಾತ್ಮಕ ಭಾವನೆಗಳನ್ನು ಬಿತ್ತುತ್ತಾನೆ. ಇಲ್ಲಿ ಭೌತಿಕ ಯುದ್ಧ ಮುಖ್ಯವಲ್ಲ. ಸಹಜವಾಗಿ ಮನಸ್ಸಿನಲ್ಲಾಗುವ ಸಕಾರಾತ್ಮಕ – ನಕಾರಾತ್ಮಕ ಭಾವನೆಗಳ ಸಂಘರ್ಷ ಮತ್ತು ನಕಾರಾತ್ಮಕ ಭಾವನೆಗಳನ್ನು ಹತ್ತಿಕ್ಕಿ ಸಕಾರಾತ್ಮಕ ಭಾವನೆಗಳನ್ನು ವೃದ್ಧಿಸಿಕೊಳ್ಳುವ ವೈಜ್ಞಾನಿಕ ವಿಧಿ-ವಿಧಾನಗಳು ಇಲ್ಲಿ ಅನಾವರಣಗೊಂಡಿರುವುದು ಮುಖ್ಯ. ಪ್ರತಿಯೊಬ್ಬರ ಮನಸ್ಸಿನಲ್ಲಾಗುವ ಆಲೋಚನೆಗಳ ಅಂತರ್ಯುದ್ಧಕ್ಕೆ ಪರಿಹಾರ ಗೀತೆಯಲ್ಲಿದೆ. ಸೃಷ್ಟಿಯಲ್ಲಿ ಸಕಾರಾತ್ಮಕ ಭಾವನೆಗಳು (ಪ್ರೀತಿ, ಅಹಿಂಸೆ, ಧೈರ್ಯ) ಮತ್ತು ನಕಾರಾತ್ಮಕ ಭಾವನೆಗಳು (ದ್ವೇಷ, ಹಿಂಸೆ, ಭಯ) ಸಹಜವಾಗಿದ್ದು, ಸಂದರ್ಭಕ್ಕನುಗುಣವಾಗಿ ಅವು ವ್ಯಕ್ತವಾಗುತ್ತವೆ. ಅವುಗಳಲ್ಲಿ ಸಕಾರಾತ್ಮಕ ಭಾವನೆಗಳನ್ನೇ ಆಯ್ಕೆ ಮಾಡಿಕೊಳ್ಳುವ ಮಾರ್ಗಸೂಚಿಗಳು ಗೀತೆಯಲ್ಲಿವೆ. ಅವುಗಳನ್ನು ಈ ಕೆಳಗಿನ ಶ್ಲೋಕದಿಂದ ಉದಾಹರಿಸಬಹುದು:

**ಇಂದ್ರಿಯಸ್ಯೇಂದ್ರಿಯಸ್ಯಾರ್ಥೇ ರಾಗದ್ವೇಷೌ ವ್ಯವಸ್ಥಿತೌ।**
**ತಯೋರ್ನ ವಶಮಾಗಚ್ಛೇತ್ ತೌ ಹ್ಯಸ್ಯ ಪರಿಪಂಥಿನೌ।।** *(೩.೩೪)*



(‘ಪ್ರತಿಯೊಂದು ಇಂದ್ರಿಯಕ್ಕೆ ಗೋಚರವಾಗುವ ಶಬ್ದಾದಿ ವಿಷಯದಲ್ಲಿ ರಾಗದ್ವೇಷಗಳಿದ್ದು, ಇಷ್ಟದಲ್ಲಿ ರಾಗ, ಅನಿಷ್ಟದಲ್ಲಿ ದ್ವೇಷವೆಂದು ವ್ಯವಸ್ಥಿತವಾಗಿರುತ್ತದೆ. ಧೀರನು ಅವುಗಳಿಗೆ ವಶನಾಗಬಾರದು. ರಾಗದ್ವೇಷಗಳು ಈತನ ಶತ್ರುಗಳು.’)

ಭಗವದ್ಗೀತೆ ಚತುರ್ವರ್ಣವನ್ನು ಪೋಷಿಸಿ, ಜಾತಿ ವ್ಯವಸ್ಥೆಯನ್ನು ಸ್ಥಿರೀಕರಿಸುತ್ತದೆ ಎಂದು ಹೇಳಲಾಗುವುದಿಲ್ಲ. ಜನ್ಮದತ್ತವಾಗಿಯೇ ಜೀನುಗಳು ಇರುವ ಪರಿಸರಕ್ಕನುಗುಣವಾಗಿ, ಅವರವರು ಪಡೆದುಕೊಳ್ಳುವ ಗುಣವಿಶೇಷಗಳಿಗೆ ಅನುಗುಣವಾಗಿ ಸೃಷ್ಟಿಯಲ್ಲಿರುವ ಎಲ್ಲವುಗಳನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ ಎಂಬುದು ಆ ಶ್ಲೋಕದ ಅರ್ಥ. ಅದನ್ನು ಇಂದಿನ ರಾಜಕೀಯ ಜಾತಿ ವ್ಯವಸ್ಥೆಯೊಡನೆ ಸಮೀಕರಿಸುವುದು ಸರಿಯಲ್ಲ. ಹಾಗಿದ್ದಲ್ಲಿ **‘ವಸುಧೈವ ಕುಟುಂಬಕಂ’** (ಪ್ರಪಂಚವೇ ಒಂದು ಕುಟುಂಬ) ಎಂಬಂಶ ಭಗವದ್ಗೀತೆಯಲ್ಲಿ ಇರುತ್ತಲೇ ಇರಲಿಲ್ಲ. ಗೀತೆಯ ಒಂದು ಪದ ಅಥವಾ ವಾಕ್ಯವನ್ನು ಆಧರಿಸಿ ವ್ಯಾಖ್ಯಾನ ಮಾಡುವುದು ಸರಿಯಲ್ಲ. ಅದರ ಹಿಂದು ಮುಂದಿನ ಶ್ಲೋಕಗಳ ಹಿನ್ನೆಲೆಯಲ್ಲಿ ಅದನ್ನು ಮೊದಲು ಅರ್ಥಮಾಡಿಕೊಳ್ಳಬೇಕು. ಗೀತೆಯನ್ನು ಸರಿಯಾಗಿ ಗ್ರಹಿಸಬೇಕು, ಬಳಿಕ ಅದನ್ನು ನಂಬಿ,

ಜೀವನದಲ್ಲಿ ಪಾಲಿಸಬೇಕು. ನಂತರ ಅದು ಅನುಭವಕ್ಕೆ ಬರುತ್ತದೆ. ಅದೊಂದು ಅನುಭವೀಯ ಜ್ಞಾನ. ಅನುಮಾನಿಸಿ, ವಕ್ರದೃಷ್ಟಿಯಿಂದ ನೋಡುವವರಿಗೆ ಅದು ಫಲಿಸುವುದಿಲ್ಲ. ಅದೊಂದು ಇಂದ್ರಿಯಾತೀತ ಜ್ಞಾನವಾಗಿದ್ದು, ಅದನ್ನು ಅರ್ಥಮಾಡಿಕೊಳ್ಳಲು ಅಲ್ಪಸ್ವಲ್ಪ ಅತೀತ ಶಕ್ತಿ ಅತ್ಯಗತ್ಯ. ಹಾಗಿದ್ದಲ್ಲಿ ಮಾತ್ರ ಗೀತೆಯ ದಿವ್ಯ ದರ್ಶನವಾಗುತ್ತದೆ. ಅತೀತ ಶಕ್ತಿ ಜನ್ಮದತ್ತವಾಗಿ ಎಲ್ಲರಿಗೂ ಬರುತ್ತದೆಯಾದರೂ ಅದರ ವೃದ್ಧಿಗೆ ದೈನಂದಿನ ತರಬೇತಿ ಅತ್ಯಗತ್ಯ.

ಮನುಷ್ಯನ ಹುಟ್ಟು, ಬದುಕು, ಸಾವುಗಳು ಮತ್ತು ಅವುಗಳಿಂದಾಚೆ ಗಳಿಕೆ ಮಾಡಿಕೊಳ್ಳುವ ಅತೀತ ಶಕ್ತಿಯ ಪ್ರಮಾಣಕ್ಕನುಗುಣವಾಗಿ ವಿವಿಧ ಬಗೆಯ ಅತೀತ ಅರಿವುಗಳು ಉಂಟಾಗುತ್ತದೆ. ಸತ್ಯ ಸಂಗತಿಗಳ ಜ್ಞಾನ ಗೀತೆಯಲ್ಲಿದೆ. ಈ ಜ್ಞಾನ ಆಧುನಿಕ ವೈದ್ಯ ವಿಜ್ಞಾನದಲ್ಲಿಲ್ಲ. ಮನುಷ್ಯನು ದೇಹ, ಮನಸ್ಸು ಮತ್ತು ಆತ್ಮಗಳ ಸಂಯೋಜನೆಯಿಂದ ಉಂಟಾಗಿರುವ ಆಧ್ಯಾತ್ಮಿಕ ಜೀವಿ. ಅವನು ಹುಟ್ಟು-ಬದುಕು-ಸಾವು-ಪುನರ್ಜನ್ಮಗಳ ಚಕ್ರದಲ್ಲಿ ನಿರಂತರ ಸಾಗುತ್ತಿದ್ದು, ಅವನು ಅತೀತ ಶಕ್ತಿಯೊಡನೆ ನೇರ ಸಂಪರ್ಕವನ್ನು ಹೊಂದಿದ್ದಾನೆ. ಸಾವೊಂದು ನಾಶದ ಕ್ರಿಯೆಯಲ್ಲ. ಅದೊಂದು ರೂಪಾಂತರ ಕ್ರಿಯೆ. ಸಾವಿನಲ್ಲಿ ದೇಹ (ವಸ್ತು) ಪಂಚಭೂತಗಳಲ್ಲಿ, ಆತ್ಮ (ಶಕ್ತಿ) ಅತೀತ ಶಕ್ತಿಯೊಡನೆ ಸೇರುತ್ತವೆ. ನಂತರ ಅವು ಮತ್ತೊಂದು ಹುಟ್ಟಿಗೆ (ಪುನರ್ಜನ್ಮ) ಕಾರಣವಾಗುತ್ತದೆ ಎಂಬ ಗೀತೆಯ ಅಂಶ ವೈಜ್ಞಾನಿಕವಾದುದು. ಜೀವಕೋಶಗಳು ಅವುಗಳಲ್ಲಿರುವ ಜೈವಿಕ ವಿದ್ಯುತ್‌ನಿಂದ ಜೀವವನ್ನು ಹೊಂದಿದ್ದು, ಸಾವಿನಲ್ಲಿ ಅವುಗಳಿಂದ ಜೈವಿಕ ವಿದ್ಯುತ್ ಹೊರಬಂದು ಪ್ರಕೃತಿಯನ್ನು ಸೇರುತ್ತದೆ. ಈ ಜೈವಿಕ ವಿದ್ಯುತ್ತೇ ಆತ್ಮ. ಈ ವೈಜ್ಞಾನಿಕ ಅಂಶವನ್ನು ತಿಳಿಸುವ ಶ್ಲೋಕವಿದು:

**ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ ।**
**ನ ಚೈನಂ ಕ್ಲೇದಯಂತ್ಯಾಪೋ ನ ಶೋಷಯತಿ ಮಾರುತಃ॥** *(೨.೨೩)*

('ಆತ್ಮಕ್ಕೆ ಸಾವಿಲ್ಲ ಮತ್ತು ಅದನ್ನು ಗಾಳಿ, ಬೆಂಕಿ, ಶಸ್ತ್ರಗಳು ಸಹ ನಾಶ ಮಾಡಲಾರವು.')

ಶಕ್ತಿಯನ್ನು ನಾಶಮಾಡಲು ಸಾಧ್ಯವಿಲ್ಲ ಎಂಬ ಅಂಶ ವೈಜ್ಞಾನಿಕವಾಗಿಯೂ ಸತ್ಯ . ಚಂಚಲ ಮನಸ್ಸನ್ನು ಶಾಂತಗೊಳಿಸಿ ಅದನ್ನು ಮತ್ತಷ್ಟು ಶಕ್ತಿಯುತವನ್ನಾಗಿಸುವ, ಧ್ಯಾನಯೋಗದಲ್ಲಿ ಹೇಳಿರುವ ಮಾರ್ಗಸೂಚಿಗಳು ಆಧುನಿಕ ಮನಃಶಾಸ್ತ್ರಜ್ಞರಿಂದಲೂ ಮನ್ನಣೆ ಪಡೆದಿವೆ. ಈ ಬಗ್ಗೆ ಉಲ್ಲೇಖನಾರ್ಹವಾದ ಶ್ಲೋಕವೊಂದು ಹೀಗಿದೆ:

**ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಮ್।**
**ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ॥** *(೬.೩೫)*

('ಚಂಚಲ ಮನಸ್ಸನ್ನು ನಿಗ್ರಹಿಸುವುದು ಬಹು ಕಷ್ಟ. ಆದರೆ ಅಭ್ಯಾಸದಿಂದಲೂ ವೈರಾಗ್ಯದಿಂದಲೂ ಅದು ಹಿಡಿತಕ್ಕೆ ಬರುತ್ತದೆ.')

ಚಂಚಲ ಮನಸ್ಸನ್ನು ಆಲೋಚನಾರಹಿತವನ್ನಾಗಿ ಮಾಡುವುದರಲ್ಲಿ ಮಾತ್ರ ಶಾಂತಿ ಇದ್ದು, ಅಂತಹ ಮನಸ್ಸು ಮಾತ್ರ ಅತೀತ ಶಕ್ತಿಯನ್ನು ಗಳಿಕೆ ಮಾಡಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಅದು ಮಾತ್ರ ಇಂದ್ರಿಯಾತೀತ ವಿಚಾರಗಳನ್ನು ಗ್ರಹಿಸಬಲ್ಲದು. ರಾಜಯೋಗದಲ್ಲಿ ವಿವರಿಸಲಾಗಿರುವ 'ಅಷ್ಟಾಂಗಯೋಗ'ವು ಚಂಚಲ ಮನಸ್ಸನ್ನು ಸ್ಥಿರಗೊಳಿಸುತ್ತದೆ ಎಂಬುದು ವೈಜ್ಞಾನಿಕವಾಗಿಯೂ ಸಾಬೀತಾಗಿದೆ. ಇಂದಿಗೂ ಈ ಶಕ್ತಿಯನ್ನು ಗಳಿಕೆ ಮಾಡಿಕೊಂಡ ಹಲವಾರು ಮಹನೀಯರುಗಳಿದ್ದಾರೆ. ಆಹಾರವಿಲ್ಲದೆ ಸೂರ್ಯನ ಬೆಳಕಿನಿಂದಲೇ ಬದುಕುವ ಯೋಗಿಗಳು ಹಿಮಾಲಯದಲ್ಲಿ ಇಂದಿಗೂ ಇದ್ದಾರೆ.

ಮನುಷ್ಯ ಹುಟ್ಟಿರುವುದೇ ಕರ್ಮ ಮಾಡುವುದಕ್ಕಾಗಿ, ಅವನು ಏನನ್ನೂ ಮಾಡದೆ ಒಂದು ಕ್ಷಣವೂ ಇರಲಾರ. ನಿದ್ರೆಯಲ್ಲೂ ಕನಸು ಕಾಣುತ್ತಾನೆ. ಮನಸ್ಸಿನ ಸ್ಥಿತಿ-ಗತಿ ಮತ್ತು ಅತೀತ ಶಕ್ತಿಯೊಡನೆ ಮನುಷ್ಯನು ಮಾಡುವ ಕಾರ್ಯಗಳಿಗೆ ಇರುವ ಅವಿನಾಭಾವ ಸಂಬಂಧವನ್ನು ತಿಳಿಸುವ ಕರ್ಮಸಿದ್ಧಾಂತ ಗೀತೆಯಲ್ಲಿದೆ. ಸೃಷ್ಟಿಯ ನಿಯಮಗಳನ್ನು ಪೋಷಿಸುವ ಕಾರ್ಯಗಳು ಪುಣ್ಯಕಾರ್ಯ (ಧರ್ಮ)ಗಳೆಂದೂ, ಮತ್ತು ಅವುಗಳನ್ನು ನಾಶ ಮಾಡುವವು ಪಾಪ ಕಾರ್ಯಗಳೆಂದೂ (ಅಧರ್ಮ) ಕರ್ಮಗಳನ್ನು ವರ್ಗೀಕರಿಸಲಾಗಿದೆ. ಸಂತೋಷ ನೀಡುವ ಕರ್ಮಗಳನ್ನು ಮಾಡುವ ರೀತಿ-ನೀತಿಗಳನ್ನು ತಿಳಿಸುವ ಶ್ಲೋಕವಿದು:

**ಕಾಯೇನ ಮನಸಾ ಬುದ್ಧ್ಯಾ ಕೇವಲೈರಿಂದ್ರಿಯೈರಪಿ।**
**ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾತ್ಮಶುದ್ಧಯೇ॥** *(೫.೧೧)*

('ಫಲಾಸಕ್ತಿಯನ್ನು ತೊರೆದು ಕೇವಲ ದೇಹ, ಮನಸ್ಸು, ಬುದ್ಧಿ ಮತ್ತು ಇಂದ್ರಿಯಗಳಿಂದ ಸತ್ವಶುದ್ಧಿಗಾಗಿ ಯೋಗಿಗಳು ಕರ್ಮವನ್ನು ಮಾಡುತ್ತಾರೆ.' ) ಈ ಅಂಶವು ವ್ಯಾಮೋಹಗಳಿಂದ ಮನಸ್ಸನ್ನು ದೂರ ಸರಿಸುತ್ತದೆ.

**'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ'** ಎಂಬುದನ್ನು, ಕರ್ಮ ಮಾಡುವ ಅಧಿಕಾರ ಮಾತ್ರ ನಿನಗಿದೆ, ಫಲ ಕೇಳುವ ಅಧಿಕಾರ ನಿನಗಿಲ್ಲವೆಂದು ವ್ಯಾಖ್ಯಾನಿಸುವುದೂ ಸಹ ಸರಿಯಲ್ಲ. ಇದರ ಹಿಂದಿನ ಆಶಯ ಇದಲ್ಲ. ಫಲ ನಿರೀಕ್ಷಿಸಿ ಕರ್ಮ ಮಾಡುವಾಗ ಮನಸ್ಸು ಅದರತ್ತ ಹೆಚ್ಚು-ಹೆಚ್ಚು ವ್ಯಾಮೋಹಿತವಾಗಿ, ನೈಜತೆಯನ್ನು ಮರೆತು, ವ್ಯಾವಹಾರಿಕವಾಗಿ ವರ್ತಿಸುತ್ತದೆ. ವ್ಯವಹಾರದಲ್ಲಿ ಸುಖಕ್ಕಿಂತ ದುಃಖವೇ ಹೆಚ್ಚು. ಫಲಾಪೇಕ್ಷೆ ಇಲ್ಲದೆ ಮಾಡುವ ಕಾರ್ಯದ ಹಿಂದೆ ಅತೀತಶಕ್ತಿಗೆ ಅದನ್ನು ಸಮರ್ಪಿಸುವ ಅದಮ್ಯ ಉದ್ದೇಶವಿದ್ದು, ಸ್ವಾರ್ಥರಹಿತದ ಕಾರ್ಯನಿಷ್ಠೆ ಮಾತ್ರ ಇರುತ್ತದೆ. ಹಾಗೆ ಮಾಡಲಾಗುವ ಕಾರ್ಯಗಳಿಂದ ಫಲ ಖಂಡಿತ. ನಿರೀಕ್ಷಿಸಿದ ಫಲ ಸಿಗದಿದ್ದಾಗ ಅಸಂತೋಷ ಉಂಟಾಗುತ್ತದೆ. ನಿರೀಕ್ಷೆ ಮಾಡದೆ ಫಲ ಸಿಕ್ಕಾಗ